ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ
**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

# ಸುತ್ತೂರಿನಲ್ಲಿ ಸತ್ಸಂಗ

**ಸುತ್ತೂರು, ಮೇ-15:** ಸತ್ಸಂಗದಲ್ಲಿ ತೊಡಗಿದ ಮನಸ್ಸು ಸಾತ್ವಿಕವಾಗಿ ಪರಿವರ್ತನೆಗೊಂಡು ದೇವಸಾಕ್ಷಾತ್ಕಾರವಾಗುವುದು ಎಂದು ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಆಧ್ಯಾತ್ಮಿಕ ಜಿಜ್ಞಾಸುಗಳಿಗೆ ಆಯೋಜಿಸಿರುವ ಅಧ್ಯಯನ ಶಿಬಿರದ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಶ್ರೀ ಸಿ.ಪಿ. ರಾಮಶೇಷುರವರು ತಿಳಿಸಿದರು.

ಸತ್ಸಂಗವೇ ನಿಸ್ಸಂಗತ್ವ, ನಿಸ್ಸಂಗತ್ವವೆ ನಿರ್ಮೋಹತಃ, ನಿರ್ಮೋಹತ್ವವೇ ನಿಶ್ಚಲತ್ತ್ವಂ, ನಿಶ್ಚಲತತ್ತ್ವೆ ಜೀವನ್‌ಮುಕ್ತಿ. ಸತ್ಸಂಗದಿಂದ ವಿವೇಕ ಜಾಗೃತಗೊಂಡು ವೈರಾಗ್ಯ ಉಂಟಾಗಿ ಮನಸ್ಸಿನ ಏಕಾಗ್ರತೆ ಹಾಗೂ ಸತ್ಯ ವಸ್ತುವಿನ ಅನುಭವ ಪಡೆಯಲು ಸಾಧ್ಯ. ಕೂಡಲ ಸಂಗನ ಶರಣರು ಬಂದರೆ ಉಬ್ಬಿ, ಕೊಬ್ಬಿ ಹರುಷದಲೋಲಾಡುವೆ, ಶರಣರ ಬರವೆನಗೆ ಪ್ರಾಣ ಜೀವಾಳವಯ್ಯ ಎಂದು ಬಸವಣ್ಣನವರು ಶರಣ ಸಂಗದ ಮಹತ್ವವನ್ನು ತಿಳಿಸಿದ್ದಾರೆ. ಸತ್ಸಂಗದಲ್ಲಿ ಮಾತನಾಡುವ ಶೈಲಿ, ಪ್ರೀತಿ-ವಾತ್ಸಲ್ಯ, ನಮ್ರತೆಯಿಂದ ಕೂಡಿದ ಮಾತುಗಳು, ಬಳಸುವ ಸುಸಂಸ್ಕೃತ ಶಬ್ದಗಳು, ವ್ಯಕ್ತಪಡಿಸುವ ಭಾವ, ಸಹಕಾರ, ವಿಶಾಲ ಮನೋಭಾವನೆಗಳಿಂದ ವ್ಯಕ್ತಿಯಲ್ಲಿ ಉತ್ತಮ ಸಂಸ್ಕಾರ, ನಡೆ-ನುಡಿ, ಜೀವನ ಶೈಲಿ, ನೈತಿಕತೆ ರೂಪಗೊಳ್ಳುವುದು. ಸಜ್ಜನರ ಸದ್ಗುಣಗಳ ಪ್ರಭಾವ ವ್ಯಕ್ತಿ ಮೇಲೆ ಬೀರುವುದು.

ಕರಿಯನಿತ್ತೊಡೆ ಒಲ್ಲೆ, ಸಿರಿಯನಿತ್ತೊಡೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತೊಡೆ ಒಲ್ಲೆ, ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ, ನಿಮ್ಮನಿತ್ತೆ ಕಾಣಾ ರಾಮನಾಥ ಎಂದ ದೇವರದಾಸಿಮಯ್ಯ ಸತ್ಸಂಗದ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ. ನಾರದ ಮುನಿಗಳು, ಮಗು, ನಿನ್ನ ಸೇವೆ ಭಗವಂತನಿಗೆ ಪ್ರಿಯವಾಯಿತು. ಈ ಯಾತ್ರೆಗೆ ಬರುವ ಅಪೇಕ್ಷೆ ಈಡೇರಿದೆ. ಈಗ ನಿನ್ನ ಆಸೆ ನೆರವೇರಬೇಕು ಅಲ್ಲವೆ? ನೀನು ನಿಜ ಸ್ವಭಾವವನ್ನು ನಿಗ್ರಹಿಸಿಕೊಂಡು, ಸಜ್ಜನನಾಗಿ ಬದುಕಿದ್ದಕ್ಕೆ ಇದು ನಿನಗೆ ಕಾಣಿಕೆ. ದರೋಡೆಕೋರ ಗಾಬರಿಯಾದ, ಈ ಸಾತ್ವಿಕ ಬದುಕಿಗಿರುವ ಭದ್ರತೆ ತನ್ನ ಕ್ರೂರ ಜೀವನಕ್ಕಿಲ್ಲ ಎಂದು ತಿಳಿದ ದರೋಡೆಕೋರ ಆ ಕ್ಷಣದಿಂದಲೆ ಎಲ್ಲವನ್ನು ತೊರೆದು ಗುರುಗಳ ಗುಂಪಿನೊಂದಿಗೆ ಸೇರಿ ಬದುಕಿ ಮುಂದೆ ಮಹರ್ಷಿ ವಾಲ್ಮೀಕಿಯಾದ. ಬುದ್ಧನು ಸಂಗದಿಂದ ಅಂಗುಲಿಮಾಲ ಮಹಾತ್ಮನಾದ. ಹೆಂಡತಿಯ ಒಂದು ಮಾತಿನಿಂದ ಸಂತರಾದವರು ತುಳಸಿದಾಸರಾದರು. ನಾವಿರುವ ವಾತಾವರಣ ನಮ್ಮ ಮನಸ್ಸನ್ನು ನಿರ್ಮಿಸುತ್ತದೆ. ಆದ್ದರಿಂದ ಮಕ್ಕಳು ಮುಂದೇನಾಗಬೇಕೆಂದು ಬಯಸುತ್ತೇವೊ ಅಂತಹ ವಾತರವಣ ನಿರ್ಮಿಸುವುದು ಹಿರಿಯರ ಜವಾಬ್ದಾರಿ ಎಂದು ತಿಳಿಸಿದರು.

ಸತ್ಸಂಗದಲ್ಲಿ ಭಾಗಿಯಾಗಿದ್ದ ಮೈಸೂರಿನ 12 ವರ್ಷದ ಕುಮಾರಿ ಎಸ್. ಸಿಂಚನ ಸತ್ಸಂಗದ ಮಹತ್ವವನ್ನು ಕುರಿತ ಹೇಳಿಕೆ ಪಾಲ್ಗೊಂಡಿದ್ದವರೆಲ್ಲರ ಮನಮುಟ್ಟುವಂತ್ತಿತ್ತು. ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳು, ಅಧ್ಯಯನ ಶಿಬಿರದ ಶಿಬಿರಾರ್ಥಿಗಳು ಚಿಂತನ-ಮಂಥನದಲ್ಲಿ ಪಾಲ್ಗೊಂಡಿದ್ದರು.



**ಚಿಂತನ-ಮಂಥನದಲ್ಲಿ ಕುಮಾರಿ ಎಸ್. ಸಿಂಚನ ಅನಿಸಿಕೆ ಹಂಚಿಕೊಳ್ಳುತ್ತಿರುವುದು. ಚಿತ್ರದಲ್ಲಿ ಪಾಲ್ಗೊಂಡ ಆಧ್ಯಾತ್ಮಿಕ ಜಿಜ್ಞಾಸುಗಳನ್ನು ಕಾಣಬಹುದು.**